ಹಾಟ್‌ಮಿಟ್ಲೆಯ ಎದುರು ಹೇಳಲಿಲ್ಲ. ಬದಲಾಗಿ ಅಲ್ಲಿಯವರೆಗೆ ನಿಯತ್ತಾಗಿ ಒಂದು ರೂಪಾಯಿ ನೀಡುತ್ತಿದ್ದವರ ಮುಂದೆಯೇ ಇಂಥ ವಾದ ಸರಣಿ ಮುಂದಿಟ್ಟು, ಅವರು ದುಡ್ಡು ಕೊಟ್ಟಿರುವುದೇ ಒಂದು ಅಪರಾಧ ಎಂಬಂತೆ ಬಿಂಬಿಸತೊಡಗಿದರು. ಆದರೆ ಕಳೆದ ಏಳೆಂಟು ವರ್ಷ ನಡೆಯದ ದುರ್ಘಟನೆ ಮುಂದೆ ನಡೆಯಲಿದೆ ಎಂಬುದನ್ನು ಈ ಮಾಮೂಲಿ ಜನ ನಂಬಲಿಲ್ಲ. 'ಒಂದು ರೂಪಾಯಿಗೆ ಇಷ್ಟೊಂದು ಸ್ಕೋಪ್ ತೆಗೆದುಕೊಳ್ಳಬೇಕಿರಲಿಲ್ಲ' ಎಂದು ಗುನುಗಿದರು. ತಮ್ಮ ಮಾತುಗಳು ಪ್ರಭಾವ ಬೀರದೇ ಇರುವುದನ್ನು ಕಂಡು 'ಯಾವುದಕ್ಕೂ ಶುಕ್ರವಾರ ನೋಡಿಬಿಡೋಣ' ಎಂದು ನಿರ್ಧರಿಸಿ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು.

ಎರಡು ದಿನ ಕಳೆದಾಗ ಮಾಮೂಲಿ ಕೊಡುವವರನ್ನು ಹೊರತು ಪಡಿಸಿದರೆ, ಲೆಕ್ಕ ಮಾಡಿದಂತೆ ಹದಿನೈದು ಮಂದಿ ಮಾತ್ರ ಒಂದು ರೂಪಾಯಿ ನೀಡಿದ್ದರು.

ಶುಕ್ರವಾರ ಬಂದೇ ಬಿಟ್ಟಿತು. ಸೂರ್ಯ ನಡುನೆತ್ತಿ ದಾಟಿ ಸ್ವಲ್ಪವೇ ದೂರ ಹೋಗಿದ್ದನಷ್ಟೆ. ಒಬ್ಬೊಬ್ಬರೇ ಬರತೊಡಗಿದರು. ಹಾಟ್‌ಮಿಟ್ಲೆ ಅವತ್ತು ಪರ್ಯಟನೆ ಹೋಗಿಲ್ಲ ಎಂಬುದರಿಂದ ಅವರಿಗೆಲ್ಲ ಆಶ್ಚರ್ಯವೂ, ಸಮಾಧಾನವೂ ಒಟ್ಟಿಗೇ ಆಯಿತು. ಜನ ಬರುವುದನ್ನು ಗಮನಿಸಿದವನಂತೆ ಹಾಟ್‌ಮಿಟ್ಲೆ ಶಾಲೆಯ ಮೈದಾನದ ಬದಿಯಲ್ಲಿ ಮೈದಾನಕ್ಕಿಂತ ನಾಲ್ಕಡಿ ಎತ್ತರದಲ್ಲಿರುವ ಧ್ವಜಸ್ತಂಬದ ಕಟ್ಟೆಯ ಮೇಲೆ ಹೋಗಿ ಕುಳಿತ. ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ಮೈದಾನ ಬಹುತೇಕ ತುಂಬಿ ಹೋಗಿತ್ತು. ಐದು ಗಂಟೆ ಹೊತ್ತಿಗೆ ಮೈದಾನದಲ್ಲಿ ಕಾಲು ಹಾಕುವುದೂ ಕಷ್ಟ ಎಂಬ ಸ್ಥಿತಿ ಉಂಟಾಯಿತು.

ಹಾಟ್‌ಮಿಟ್ಲೆ ಮೆಲ್ಲಗೆ ಎದ್ದು ನಿಂತ. ಹಾಟ್‌ಮಿಟ್ಲೆ ಎತ್ತರದಲ್ಲಿ ಇದ್ದಿದ್ದರಿಂದ ಅಷ್ಟು ಜನರ ನಡುವೆಯೂ ಸ್ಪಷ್ಟವಾಗಿ ಕಾಣತೊಡಗಿದ.

'ಹಾಟ್‌ಮಿಟ್ಲೆ ಡೂ ಮಿಟ್ಲೆ ಹಾಟ್ ಹಾಟ್ ಹಾಟ್' ಎಂದು ಜೋರಾಗಿ ಬೊಬ್ಬೆ ಹೊಡೆದ. ಜನರು ತಮ್ಮ ಮಾತುಗಳನ್ನು ನಿಲ್ಲಿಸಿದರು. ಹಾಟ್‌ಮಿಟ್ಲೆಯ ಈ ಮಾತು ಹೊರತುಪಡಿಸಿದರೆ ಒಂದು ಸಣ್ಣ ಸದ್ದು ಕೂಡಾ ಇರಲಿಲ್ಲ. ಮುಂದೇನಾಗುತ್ತದೆ ಎಂದು ಜನ ಕಾಯತೊಡಗಿದರು. ಆಗ 'ಕಾಸ್ಟ್ ಮಿಟ್ಲೆ ವೈಟ್ ಮಿಟ್ಲೆ ಕಾಸ್ಟ್ ಕಾಸ್ಟ್ ಕಾಸ್ಟ್' ಎಂದು ಒಮ್ಮೆ ಜೋರಾಗಿ ಕಿರುಚಿ ಸುಮ್ಮನಾದ.

ಸ್ವಲ್ಪ ಹೊತ್ತಿನ ನೀರವ ಮೌನ. ಬಳಿಕ ತನ್ನ ಬಳಿ ದೊಡ್ಡ ಲುಂಗಿಯಲ್ಲಿ ಕಟ್ಟಿದ್ದ ದೊಡ್ಡ ಗಂಟಿನೊಳಗೆ ಕೈ ಹಾಕಿ ಸಿಕ್ಕಷ್ಟು ನೋಟುಗಳನ್ನು ಹೊರತೆಗೆದು ನಿಂತ. ಮತ್ತೆ ನೀರವ ಮೌನ... ಒಂದೊಂದೇ ನೋಟುಗಳನ್ನು ಜನರತ್ತ ಬಿಸಾಕಲು ಆರಂಭಿಸಿದ. ಬಿಸಾಕುವ ಕಾರ್ಯ ವೇಗವಾಗತೊಡಗಿತು. 'ಹಾಟ್‌ಮಿಟ್ಲೆ ಟೂಮಿಟ್ಲೆ ಹಾಟ್ ಹಾಟ್ ಹಾಟ್' ಎಂದೂ 'ಕಾಸ್ಟ್ ಮಿಟ್ಲೆ ವೈಟ್ ಮಿಟ್ಲೆ ಕಾಸ್ಟ್ ಕಾಸ್ಟ್ ಕಾಸ್ಟ್' ಎಂದೂ ಆಗಾಗ ಬೊಬ್ಬೆ ಹೊಡೆಯುತ್ತಾ ನೋಟುಗಳನ್ನು ಬಿಸಾಕುತ್ತಲೇ ಇದ್ದ. ಆತನ ಬೊಬ್ಬೆ ಯಾರ ಕಿವಿಗೂ ಬೀಳುತ್ತಿರಲಿಲ್ಲ. ಎಲ್ಲರೂ ನೋಟು ಹೆಕ್ಕುತ್ತ, ಒಬ್ಬರ ಕೈಯಿಂದ ಒಬ್ಬರು ಕಸಿಯುವ ಭರದಲ್ಲಿ ಒಬ್ಬರಮೇಲೆ ಒಬ್ಬರು ಬಿದ್ದು ಹೊರಳಾಡುತ್ತಿದ್ದರು. ಅರ್ಧಗಂಟೆಯಲ್ಲಿ ಮೈದಾನ ಎಂದರೆ ಮಹಾಭಾರತ ಯುದ್ಧ ನಡೆದ ಕುರುಕ್ಷೇತ್ರವೇನೋ ಎಂಬಂತೆ ಭಾಸವಾಗತೊಡಗಿತು. ಬೊಬ್ಬೆ, ಕಿರುಚಾಟ, ಹೊಡೆದಾಟ, ಹೊರಳಾಟ, ಉರುಳಾಟಗಳು ನಡೆದವು. ಈ ಕೋಲಾಹಲವನ್ನು ಪೊಲೀಸರಿಗೆ ಯಾರೋ ಮುಟ್ಟಿಸಿದರು. ಪೊಲೀಸರಿಗೆ ಮುಟ್ಟಿಸಿದ ವಿಚಾರ ಆ ಗೊಂದಲದ ನಡುವೆಯೂ ಹೇಗೋ ಮೈದಾನದಲ್ಲಿ ಹೊರಳಾಡುತ್ತಿರುವವರಿಗೂ ಮುಟ್ಟಿತು. ಇನ್ನು ಇಲ್ಲಿ ಇದ್ದರೆ ಪೊಲೀಸರ